

# ಸ್ಪಾ ಒಡತಿಯ ಬಿಸಿನೆಸ್ ಕಥೆ

ಫಿಲಿಪ್ಪೀನ್ಸ್‌ನಿಂದ ಬೆಂಗಳೂರಿಗೆ ಬಂದ ಎಮ ಟ್ರಿನಿಡಾಡ್ ಈಗ ಎರಡು ಸ್ಪಾಗಳ ಒಡತಿ. ಸೌಂದರ್ಯ ವರ್ಧಕ ಉತ್ಪನ್ನಗಳನ್ನು ದೇಶದ ವಿವಿಧ ನಗರಗಳಿಗೆ ಮಾರಾಟ ಮಾಡುವ ಉದ್ಯಮವನ್ನೂ ನಡೆಸುತ್ತಿದ್ದಾರೆ. ಬೆಂಗಳೂರಿಗೆ ಬಂದು ನೆಲೆ ನಿಂತ ವಿದೇಶೀಯರೆಲ್ಲ ಸೇರಿ ಕಟ್ಟಿದ 'ಎಕ್ಸ್‌ಪಾಟ್ ಲೈಫ್ ಇಂಡಿಯಾ' ಸಂಘದ ಸಂಸ್ಥಾಪಕ ಅಧ್ಯಕ್ಷರೂ ಹೌದು.

'ಭಾರತೀಯ ಸಂಸ್ಕೃತಿ, ಕಲೆ, ಭಾಷೆ ಬಹಳ ಆಕರ್ಷಕ. ಇಲ್ಲಿನ ಉಡುಗೆಯ ವೈವಿಧ್ಯವಂತೂ ಪ್ರಪಂಚದ ಯಾವುದೇ ದೇಶದಲ್ಲೂ ಕಾಣಸಿಗಲ್ಲ. ಸಾಂಪ್ರದಾಯಿಕ ಉಡುಪು ಸೀರೆಯಲ್ಲಿ ಭಾರತೀಯ ಮಹಿಳೆಯೊಬ್ಬಳನ್ನು ಮೊತ್ತ ಮೊದಲು ಫಿಲಿಪ್ಪೀನ್ಸ್‌ನಲ್ಲಿ ನೋಡಿದ್ದೆ. ಆಕೆಯನ್ನು ನೋಡಿದಾಗ ನಾನೂ ಸೀರೆ ಉಡಬೇಕು ಅನಿಸಿತ್ತು. ಇದಾಗಿ ಸುಮಾರು 10 ವರ್ಷಗಳೇ ಕಳೆದಿವೆ. ಆದರೆ ಒಂದು ದಿನ ನಾನೂ ಭಾರತಕ್ಕೆ ಬಂದು ಇದೇ ಉಡುಗೆಯನ್ನು ತೊಡುತ್ತೇನೆ ಎಂದು ಆಗ ಕನಸಿನಲ್ಲೂ ಅಂದುಕೊಂಡಿರಲಿಲ್ಲ. ಈಗ ಸೀರೆಯೇ ನನ್ನ ಅತ್ಯಂತ ಫೇವರೆಟ್ ಉಡುಗೆ...'

ಇದು ಫಿಲಿಪ್ಪೀನ್ಸ್‌ನಿಂದ ಬೆಂಗಳೂರಿಗೆ ಕಳೆದ ಎಂಟು ವರ್ಷಗಳ ಹಿಂದೆ ಬಂದು ಸೌಂದರ್ಯವರ್ಧಕ ಉದ್ಯಮದಲ್ಲಿ ತೊಡಗಿರುವ ಎಮ ಟ್ರಿನಿಡಾಡ್ ಅವರ ನುಡಿಗಳು. ಹಾಗೆ ನೋಡಿದರೆ 42ರ ಹರೆಯದ ಎಮ ಟ್ರಿನಿಡಾಡ್ ಬೆಂಗಳೂರಿಗೆ ಬಂದದ್ದು ಆಕಸ್ಮಿಕವಾಗಿ. ಉದ್ಯೋಗ ಅರಸುತ್ತಾ 2005ರಲ್ಲಿ ಮೊದಲು ಮುಂಬಯಿಗೆ ಬಂದ ಎಮ, ಅಲ್ಲಿಂದ ಚಂಡೀಗಢ, ದೆಹಲಿಗಳಲ್ಲೂ ಉದ್ಯೋಗ ಬೇಟೆ ನಡೆಸಿದ್ದಾರೆ. ಇಲ್ಲೆಲ್ಲೂ ಅವರ ಆಸೆ ಗರಿಗೆದರಲಿಲ್ಲ, ಕನಸುಗಳು ಕೈಗೂಡಲಿಲ್ಲ. ಕೊನೆಗೆ ಬೆಂಗಳೂರೇ ಇವರಿಗೆ ಸೂಕ್ತ ತಾಣ ಎನಿಸಿದ್ದು. ಈಗ ಎಮ ಎರಡು ಸ್ಪಾಗಳ ಒಡತಿ.

'ಎಮ ಸ್ಪಾ ಪ್ರೈವೇಟ್ ಲಿಮಿಟೆಡ್' ಎಂಬುದು ಆ್ಯಂಟಿ ಏಜಿಂಗ್‌ಗೆ ಸಂಬಂಧಿಸಿದ ಸ್ಪಾ. ಇದರ ಸಂಸ್ಥಾಪಕಿ ಮತ್ತು ವ್ಯವಸ್ಥಾಪಕ ನಿರ್ದೇಶಕಿಯಾದ ಎಮ ಹಲವಾರು ಸೌಂದರ್ಯ ತಜ್ಞೆಯರಿಗೆ ಕೆಲಸ ಕೊಟ್ಟಿದ್ದಾರೆ. ಈ ಸ್ಪಾಗಳ ಮೂಲಕ ಸ್ಕಿನ್ ವೈಟೆನಿಂಗ್ (ತ್ವಚೆಗೆ ಸಂಬಂಧಿಸಿದ ಸೌಂದರ್ಯ ಸಾಧನ) ಉತ್ಪನ್ನಗಳನ್ನು ಭಾರತದ ವಿವಿಧ ನಗರಗಳಿಗೆ ಸರಬರಾಜು ಮಾಡುವುದು ಕೂಡ ಈ ಸ್ಪಾದ ಕೆಲಸ. ಆ್ಯಂಟಿ ಏಜಿಂಗ್ ಮತ್ತು ಸ್ಕಿನ್ ಲೈಟ್ನಿಂಗ್ ಟ್ರೀಟ್‌ಮೆಂಟ್ ಬಗ್ಗೆ ವಿಶೇಷ ಪರಿಣತಿ ಪಡೆದಿರುವ ಎಮ, ಇದೇ ಸ್ಪಾಗಳಲ್ಲಿ ಯೋಗವನ್ನೂ ಕಲಿಸುತ್ತಾರೆ.

'ಬೆಂಗಳೂರು ನಗರ ನೋಡಿ ತುಂಬ ಖುಷಿಯಾಯ್ತು. ನಾನು 2007ರಲ್ಲಿ ಇಲ್ಲಿಗೆ ಬಂದಾಗ ನಗರ ಗಿಡಮರಗಳಿಂದ ತುಂಬಿ ಹಸುರಿನಿಂದ ಕಂಗೊಳಿಸು ತ್ತಿತ್ತು. ವಾತಾವರಣ ಸಖತ್ ಎಂಜಾಯೇಬಲ್ ಅನಿಸಿತ್ತು. ಹೀಗಾಗಿ ಇಲ್ಲೇ ನೆಲೆ ನಿಲ್ಲಲು ನಿರ್ಧರಿಸಿದೆ. ನನ್ನ ಕುಟುಂಬವನ್ನೂ ಇಲ್ಲಿಗೇ ಕರೆದುಕೊಂಡು ಬಂದೆ. ಸದ್ಯ ಇಂದಿರಾನಗರದಲ್ಲಿ ವಾಸವಿದ್ದೇವೆ' ಎನ್ನುತ್ತಾರೆ ಈ ಸ್ಪಾ ಒಡತಿ.

'ಬೆಂಗಳೂರಿನ ಜನ ವಿದೇಶೀಯರನ್ನು ಕಂಡರೆ ಬಹಳ ಅಕ್ಕರೆ ತೋರುತ್ತಾರೆ. ನಾನು ನೋಡಿದಂತೆ ಈ ರಾಜ್ಯದಲ್ಲಿ ಎರಡು ರೀತಿಯ ಜನ ಇದ್ದಾರೆ. ಕೆಲವರು ಅತ್ಯಂತ ಶ್ರೀಮಂತರಾದರೆ ಇನ್ನೂ ಕೆಲವರು ಅತೀ ಬಡವರು. ಈ ಇಬ್ಬರ ಮಧ್ಯೆ ಇರುವ ಮಧ್ಯಮ ವರ್ಗದ ಜನ ಬಹಳ ಕಡಿಮೆ ಎಂಬುದು ನನ್ನ ಭಾವನೆ. ನಗರದಲ್ಲೇ ಕೆಲವು ಕಡೆಗಳಲ್ಲಿ ಮೂಲಭೂತ ಸೌಕರ್ಯವೂ ಇಲ್ಲದಿರುವುದನ್ನು ನಾನು ನೋಡಿದ್ದೇನೆ. ಇಲ್ಲಿ ಕೆಲಸ ಮಾಡುವುದು ಬಹಳ ಸವಾಲಾಗಿತ್ತು. ಆದರೆ ಈಗ ಇಲ್ಲೇ ಸೆಟಲ್ ಆಗಿದ್ದೇನೆ. ಅವಕಾಶಗಳೂ ಹೆಚ್ಚಾಗಿವೆ' ಎನ್ನುತ್ತಾರೆ ಎಮ.

ಫಿಲಿಪ್ಪೀನ್ಸ್‌ನಲ್ಲಿ ಉದ್ಯೋಗಾವಕಾಶಗಳಿಲ್ಲವೇ? ಖಂಡಿತಾ ಇದೆ. ಅಲ್ಲಿ ಮಾನವ ಸಂಪನ್ಮೂಲ ಹೇರಳವಾಗಿದೆ. ಜಗತ್ತಿನ ನಾನಾ ದೇಶಗಳಿಗೆ ಫಿಲಿಪ್ಪೀನ್ಸ್ ನ ಜನ ಸಂಪನ್ಮೂಲ ವ್ಯಕ್ತಿಗಳಾಗಿ ಹೋದವರಿದ್ದಾರೆ. ಸಾಕ್ಷರರ ಸಂಖ್ಯೆ ಬಹಳ ಹೆಚ್ಚಿದೆ. ಎಲ್ಲರೂ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆ. ಹೀಗಾಗಿ ಪ್ರಪಂಚದ ಎಲ್ಲ ದೇಶಗಳಲ್ಲೂ ನಮ್ಮ ಜನರಿಗೆ ಹೆಚ್ಚಿನ ಬೇಡಿಕೆ ಇದೆ. ಆರೋಗ್ಯ ಉದ್ಯಮವೂ ಬಹಳ ಚೆನ್ನಾಗಿದೆ. ಸ್ಪಾನಿಷ್ ಇಲ್ಲಿನ ಅಧಿಕೃತ ಭಾಷೆಯಾಗಿತ್ತು. ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಫಿಲಿಪ್ಪೀನ್ಸ್ ಅನ್ನು ಫ್ರೆಂಚ್ ಅಧಿಕಾರಿಗಳು ಆಳುತ್ತಿದ್ದರು. ಬಳಿಕ 1900ರಲ್ಲಿ ದೇಶ ಸ್ವತಂತ್ರವಾಗಿ ಇಂಗ್ಲಿಷ್ ಅನ್ನು ಅಧಿಕೃತ ಭಾಷೆಯಾಗಿ ಘೋಷಣೆ ಮಾಡಿತು. ಹೀಗಾಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವೇ ಕಡ್ಡಾಯವಾಯಿತು. ಆದರೆ ಇಡೀ ಫಿಲಿಪ್ಪೀನ್ಸ್ ನಲ್ಲಿ ಒಟ್ಟು 175 ಭಾಷೆಗಳನ್ನಾಡುವ ಜನರಿದ್ದಾರೆ ಎಂದು ತಮ್ಮ ದೇಶ ಭಾಷೆಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ.

## ವಾರಾಂತ್ಯದಲ್ಲಿ ಬ್ಯುಸಿ

ಎಲ್ಲರೂ ವಾರಾಂತ್ಯಗಳಲ್ಲಿ ಆರಾಮವಾಗಿ ಇದ್ದರೆ ಎಮ ಬ್ಯುಸಿಯಾಗುವುದು ವಾರಾಂತ್ಯದಲ್ಲೇ. ಏಕೆಂದರೆ ಸ್ಪಾ ಕ್ಕೆ ಜನ ಬರುವುದು ವಾರಾಂತ್ಯದಲ್ಲೇ. ಆದರೂ ಭಾನುವಾರ ಮಧ್ಯಾಹ್ನದ ವೇಳೆಯನ್ನು ಮಕ್ಕಳಿಗಾಗಿ ಮೀಸಲಿಡುತ್ತೇನೆ. ಸಿನಿಮಾ ನೋಡುವುದು, ಹೋಟೆಲ್‌ನಲ್ಲಿ ರಾತ್ರಿ ಊಟ ಮಾಡುವುದು, ಬೇರೆ ಬೇರೆ ತಿಂಡಿ ತಿನಿಸುಗಳನ್ನು ತಿನ್ನುವುದು ಇಷ್ಟ ಎನ್ನುವ ಎಮ ಅವರಿಗೆ ಚಾರಣ ಇಷ್ಟವಾದ ಹವ್ಯಾಸ. ಸಾಹಸ ಕ್ರೀಡೆಗಳೆಂದರೆ ಬಹಳ ಪ್ರಿಯ. ಬೆಟ್ಟ ಹತ್ತುವುದು, ರ್‍ಯಾಪೆಲ್ಲಿಂಗ್ ಗಳನ್ನು ತಮ್ಮ ವಿದೇಶಿ ಸ್ನೇಹಿತರೊಂದಿಗೆ ಆಗಾಗ ಮಾಡುತ್ತಿರುತ್ತಾರಂತೆ.

ಎಮ 'ಎಕ್ಸ್‌ಪಾಟ್ ಲೈಫ್ ಇಂಡಿಯಾ' ಸಂಘದ ಸಂಸ್ಥಾಪಕರೂ ಹೌದು. ಬೇರೆ ಬೇರೆ ದೇಶಗಳಿಂದ ಬಂದು ಬೆಂಗಳೂರಿನಲ್ಲಿ ನೆಲೆ ನಿಂತ ಸ್ನೇಹಿತರೆಲ್ಲ ಸೇರಿ ಕಟ್ಟಿಕೊಂಡಿರುವ ವಿಶಿಷ್ಟ ಸಂಘ ಇದು. 'ಇದರಲ್ಲಿ ನೂರಾರು ಸದಸ್ಯರಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ಪಾರ್ಟಿ, ಪ್ರವಾಸ ಕೈಗೊಳ್ಳುತ್ತೇವೆ' ಎಂಬುದು ಎಮ ವಿವರಣೆ.

'ವರ್ಷಕ್ಕೆ ಒಂದು ಬಾರಿ ಬರೀ ಎರಡು ವಾರಗಳ ಮಟ್ಟಿಗೆ ಫಿಲಿಪ್ಪೀನ್ಸ್ ಗೆ ಹೋಗಿ ಬರುತ್ತೇವೆ' ಎನ್ನುವ ಎಮ ಗೆ ಮೂರು ಮಂದಿ ಹೆಣ್ಣು ಮಕ್ಕಳಿದ್ದಾರೆ. ಇಮಾನ್ಯುಯೆಲ್ಲೆ (21 ವರ್ಷ), ನಾರ್ನಿಯಾ (17 ವರ್ಷ) ಮತ್ತು ಹಮಾಯಿನಿ (12 ವರ್ಷ). ಬೆಂಗಳೂರಿನಲ್ಲೇ ಓದುತ್ತಿದ್ದಾರೆ. ಕೌಟುಂಬಿಕ ವಿಷಯದ ಬಗ್ಗೆ ಹೆಚ್ಚೇನೂ ಹೇಳಿಕೊಳ್ಳಲು ಇಷ್ಟಪಡದ ಎಮ 'ನಾನು ಸಿಂಗಲ್ ಪೇರೆಂಟ್, ಕುಟುಂಬದ ಬಗ್ಗೆ ಬೇರೇನೂ ಹೇಳುವುದಕ್ಕೆ ಇಷ್ಟಪಡಲ್ಲ' ಎನ್ನುತ್ತಾರೆ.

■ ಅವನೀಶ್